expedite the disciplinary proceedings and dispose off the same. Circular instructions have been issued to all the Divisional Controllers and disciplinary authorities to review all pending cases and dispose off them by imposing minor penalties if the case do not warrant imposition of major penalties like dismissal. These have been come down very effectively. ಮಾನ್ಯ ಸದಸ್ಯರಿಗೆ ಇಷ್ಟು ಭರವಸೆ ಕೊಡಬಹುದು. ಈಗ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಏನು ತೊಂದರೆಗಳು, ಅಡಚಣೆಗಳು ಬಂದಿವೆ, ಇದೆಲ್ಲಾ ಬದಲಾವಣೆಯಾಗುತ್ತಿದೆ. ಇನ್ನು ಮುಂದೆ ಆ ರೀತಿ ಆಗುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯಕ್ :- ಎಷ್ಟು ದಿವಸದಲ್ಲಿ ಬದಲಾವಣೆ ಮಾಡಿ ಸರಿಯಾಗಿ ಬಸ್ ಓಡಿಸುವ ವ್ಯವಸ್ಥೆ ಮಾಡುತ್ತೀರಿ? ಇಲ್ಲವೇ ಪ್ರೈವೇಟ್‌ನವರಿಗೆ ಕೊಟ್ಟುಬಿಡಿ. ಎಲ್ಲಾ ಕಂಡಕ್ಟರ್ಸ್ ಪೋಸ್ಟ್ ಆಗುವವರೆಗೆ ಖಾಸಗಿಯವರಿಗೆ ಕೊಡಿ ಅಥವಾ ಯಾರಿಗಾದರೂ ಟೆಂಪೊರರಿಯಲ್ಲಿ ಕೊಡಿ. ಅಲ್ಲಿಯವರಿಗೆ ಗತಿ ಏನು?

ಶ್ರೀ ಅಜೀಜ್ ಸೇಠ್ :- ಪ್ರೈವೆಟೈಸೇಷನ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಕೊಟ್ಟುಬಿಡಿ ಎಂದರೆ ಆದಾಗುವುದಿಲ್ಲ. ಅದಕ್ಕೂ ನಿಯಮಗಳು ಅದು ಇದು ಯೋಚನೆ ಮಾಡಬೇಕಾಗುತ್ತದೆ. It will also take sometime. I have also have a mind to privatise certain sections of the KSRTC.

ಮುಂಡರಗಿ ವಿದ್ಯುತ್ ವಿಭಾಗದಲ್ಲಿ ಸಿಬ್ಬಂದಿಯ ಕೊರತೆ

1580. ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) :– ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮುಂಡರಗಿ ತಾಲ್ಲೂಕಿನಲ್ಲಿ ವಿದ್ಯುತ್ ಉಪ ವಿಭಾಗದ ಕಛೇರಿ ಇದ್ದು ಅಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರವು ಆ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗುವುದು;

ಇ) ಮುಂಡರಗಿ ಮತ್ತು ಗದಗ ತಾಲ್ಲೂಕುಗಳಲ್ಲಿ ರೈತರ ಪಂಪುಸೆಟ್ಟಿಗೆ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಳಂಬವಾಗಲು ಕಾರಣವೇನು;

ಈ) ಗದಗ ಮತ್ತು ಮುಂಡರಗಿ ತಾಲ್ಲೂಕಿನಲ್ಲಿ ರೈತರ ಎಷ್ಟು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ, ಇನ್ನು ಎಷ್ಟು ದಿವಸಗಳಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗುತ್ತದೆ;

ಉ) ಗದಗ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜು ಮಾಡಲಿಕ್ಕೆ ಉಪಕರಣಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) –

ಅ) ಬಂದಿದೆ.

ಆ) ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು.

ಇ) ಈ ಸಾಲಿನಲ್ಲಿ (1991–92) ಮುಂಡರಗಿ ಮತ್ತು ಗದಗ ತಾಲ್ಲೂಕುಗಳಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕಾಗಿ ನಿಗದಿಪಡಿಸಿರುವ ಗುರಿ ಅನುಕ್ರಮವಾಗಿ 110 ಮತ್ತು 75. ಫೆಬ್ರವರಿ 92ರ ಅಂತ್ಯದವರೆಗೆ ಮುಂಡರಗಿ ತಾಲ್ಲೂಕಿನಲ್ಲಿ 119 ನೀರಾವರಿ ಪಂಪುಸೆಟ್ಟುಗಳನ್ನೂ ಮತ್ತು ಗದಗ ತಾಲ್ಲೂಕಿನಲ್ಲಿ 87 ನೀರಾವರಿ ಪಂಪುಸೆಟ್ಟುಗಳನ್ನು ಈಗಾಗಲೇ ವಿದ್ಯುದೀಕರಿಸಿ, ಗುರಿ ಮೀರಿದ ಸಾಧನೆಯನ್ನು ಮಾಡಲಾಗಿದೆ. ಹೀಗಾಗಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ವಿಷಯದಲ್ಲಿ ವಿಳಂಬವಾಗುತ್ತಿಲ್ಲ.

ಈ) ಫೆಬ್ರವರಿ 92ರ ಅಂತ್ಯದವರೆಗೆ ಗದಗ ತಾಲ್ಲೂಕಿನಲ್ಲಿ 45 ನೀರಾವರಿ ಪಂಪುಸೆಟ್ಟುಗಳ ಮತ್ತು ಮುಂಡರಗಿ ತಾಲ್ಲೂಕಿನಲ್ಲಿ 64 ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ಕಾರ್ಯವು ಬಾಕಿ ಉಳಿದಿದೆ. ಈ ಕಾರ್ಯವನ್ನು 'ರೋಸ್ಟರ್' ಪ್ರಕಾರ, ತಯಾರಿಸಲ್ಪಟ್ಟಿರುವ ಆದ್ಯತಾ ಪಟ್ಟಿಯಲ್ಲಿನ ಹಿರಿತನದ ಮೇರೆಗೆ ಪೂರ್ಣಗೊಳಿಸಲಾಗುವುದು.

ಉ) ಗದಗ ಮತ್ತು ಮುಂಡರಗಿ ತಾಲ್ಲೂಕುಗಳಿಗೆ ಅಗತ್ಯಕ್ಕೆ ತಕ್ಕಂತೆ ವಿದ್ಯುತ್ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.

ಊ) 'ಉ' ಕ್ಕೆ ಮೇಲೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಕೆ.ಹೆಚ್. ಕುರುಡಗಿ :- ನನ್ನ 'ಆ' ಪ್ರಶ್ನೆಗೆ ಉತ್ತರವಾಗಿ "ನಾವು ಶೀಘ್ರದಲ್ಲಿ ತುಂಬುತ್ತೇವೆ" ಎಂದು ಹೇಳಿದ್ದಾರೆ. ನಮ್ಮ ಮುಂಡರಗಿ ತಾಲ್ಲೂಕಿನ ವಿದ್ಯುತ್ ಉಪವಿಭಾಗದ ಕಚೇರಿಯಲ್ಲಿ ಸಿಬ್ಬಂದಿ ಇರುವವರೇ ಮೂರು ಮಂದಿ. ಆದ್ದರಿಂದ ಅಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಶೀಘ್ರ ಎಂದರೆ ಎರಡು ವರ್ಷವೋ ಮೂರು ವರ್ಷವೋ ಅಥವಾ ಸೆಕ್ಷನ್ ಬಂದ್ ಆಗಬೇಕೋ ಎಂದು ಕೇಳುತ್ತೇನೆ.

ಶ್ರೀ ಎಂ. ರಾಮಪ್ಪ :- ಮಾನ್ಯ ಅಧ್ಯಕ್ಷೆಯವರೆ, ಈಗ ಇಂಟರ್‌ವ್ಯೂ ಕರೆಯುತ್ತಿದ್ದೇವೆ. ಇಷ್ಟರಲ್ಲೇ ಆಗುತ್ತದೆ. ಐದಾರು ತಿಂಗಳಲ್ಲಿ ಎಲ್ಲಾ ಸರಿಹೋಗಬಹುದು. ಗೌರ್ನಮೆಂಟ್ ಕೂಡ ನಮಗೆ ಕೆಲವು ಹುದ್ದೆಗಳಿಗೆ ಪರವಾನಗಿ ಕೊಡಬೇಕು. ಅದು ಕೊಟ್ಟನಂತರ ನಾವು ಮಾಡುತ್ತೇವೆ.

ಶ್ರೀ ಕೆ.ಹೆಚ್. ಕುರುಡಗಿ :- ಗದಗ ತಾಲ್ಲೂಕಿನ ಕಚೇರಿಗೆ ಟೆಂಪರರಿಯಾಗಿ ಕೆಲವು ದಿವಸ ಕಾಲ ನೇಮಕ ಮಾಡಿ ಕೆಲಸ ಸಾಗುವಂತೆ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ. ರಾಮಪ್ಪ :- ಟೆಂಪರರಿಯಾಗಿ ಹಾಕುವುದಕ್ಕೆ ಬರುವುದಿಲ್ಲ. ಮಿಕ್ಕದ್ದನ್ನು ನಾನು ನೋಡಿ ಏನಾದರೂ ಅಡ್ಜಸ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಕುರುಡಗಿ :- ಮುಂಡರಗಿ ತಾಲ್ಲೂಕಿನಲ್ಲಿ ತಾವು ಗುರಿ ಸಾಧನೆ ಮಾಡಿರುವುದಾಗಿ ತಿಳಿಸಿದ್ದೀರಿ. ಆದರೆ ಅಲ್ಲಿ ಇನ್ನೂ 100 ಜನ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ.

ಶ್ರೀ ಎಂ. ರಾಮಪ್ಪ :- ಮುಂಡರಗಿಯಲ್ಲಿ ನಮ್ಮ ಗುರಿ ಇದ್ದದ್ದು 100 ಆದರೆ ಸಾಧನೆ 110 ಮಾಡಿದ್ದೇವೆ. ಹಾಗೆಯೇ ಗದಗ್‌ನಲ್ಲಿ 75 ಗುರಿ ಇದ್ದು 87 ಸಾಧನೆ ಮಾಡಿದ್ದೇವೆ. ಇದಾದಮೇಲೆ ನಮ್ಮಲ್ಲಿ ಅಪ್ಲಿಕೇಷನ್ಸ್ ಗದಗ್‌ನಲ್ಲಿ 45 ಬಾಕಿ ಇದ್ದರೆ, ಮುಂಡರಗಿಯಲ್ಲಿ 64 ಇವೆ. ಇವಕ್ಕೂ ಇನ್ನು ಐದಾರು ತಿಂಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಯತ್ನ ಮಾಡುತ್ತೇವೆ.

ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಪಡಿತರ ಹಂಚಿಕೆಯ ಪ್ರಮಾಣವನ್ನು ಹೆಚ್ಚಿಸುವುದು

1576. ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತಿರುವ ಅಕ್ಕಿ ಮತ್ತು ಪಾಮೋಲಿನ್ ಎಣ್ಣೆಯ ಪ್ರಮಾಣವನ್ನು ಕಡಿತಗೊಳಿಸಲಾಗಿರುವುದು ನಿಜವೇ ?
2) ಹಾಗಿದ್ದಲ್ಲಿ ಈ ಕಡಿತಕ್ಕೆ ಕಾರಣಗಳಾವುವು?
3) ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ವಿತರಿಸಲಾಗುತ್ತಿರುವ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸುವ ಯೋಜನೆಯಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಹೌದು
2) ಗ್ರಾಮಾಂತರ ಪ್ರದೇಶಗಳಲ್ಲಿರುವ ಹಸಿರು ಕೇಸರಿ ಕಾರ್ಡುಗಳಿಗೆ ವಿತರಿಸಲಾಗುತ್ತಿರುವ ಅಕ್ಕಿಯ ಪ್ರಮಾಣ ಕಡಿಮೆಗೊಳಿಸಿಲ್ಲ, ಕೇಂದ್ರ ಸರ್ಕಾರವು ಹಂಚಿಕೆ ಮಾಡುತ್ತಿರುವ ಪ್ರಮಾಣವನ್ನು ಕಡಿಮೆ ಗೊಳಿಸಿದ ಕಾರಣ ಪಟ್ಟಣ ಪ್ರದೇಶಗಳಲ್ಲಿ ಹಾಗೂ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿಯ